# ಭಗೀರಥ

**ಅ) ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಬರೆಯಿರಿ (Answer the following in one sentence)**

**೧. ಭಗೀರಥ ಯಾರಿಗೆ ಸ್ವರ್ಗ ಸಿಗಬೇಕೆಂದು ಚಿಂತಿಸುತ್ತಿದ್ದನು?**

ಉ: ಭಗೀರಥ ತನ್ನ ಅರವತ್ತು ಸಾವಿರ ಜನ ತಾತಂದಿರರಿಗೆ ಸ್ವರ್ಗ ಸಿಗಬೇಕೆಂದು ಚಿಂತಿಸುತ್ತಿದ್ದನು .

**೨. ಋಷಿಗಳು ಭಗೀರಥನಿಗೆ ಏನೆಂದು ಹೇಳಿದರು?**

ಉ: ಗಂಗೆಯನ್ನು ಭಗೀರಥನ ತಾತಂದಿರ ಬೂದಿಯ ಮೇಲೆ ಹರಿಸಬೇಕೆಂದು ಋಷಿಗಳು ಹೇಳಿದರು.

**೩. ಭಗೀರಥನು ಏಕೆ ತಪಸ್ಸಿಗೆ ಕುಳಿತನು?**

ಉ: ದೇವಲೋಕದ ಗಂಗೆಯನ್ನು ಭೂಮಿಗೆ ತರಲು ಭಗೀರಥನು ತಪಸ್ಸಿಗೆ ಕುಳಿತನು.

**೪. ಗಂಗೆ ಭಗೀರಥನಿಗೆ ಏನೆಂದು ಹೇಳಿದಳು?**

ಉ: “ ನಿನ್ನ ಇಚ್ಛೆಯಂತೆ ನಾನು ಭೂಮಿಗೆ ಧುಮುಕುತ್ತೇನೆ ಆದರೆ ನನ್ನ ರಭಸವನ್ನು ತಡೆಯುವವರು ಯಾರು ಎಂದಳು”.

**೫. ಗಂಗೆ ಹರಿಯುವ ರಭಸವನ್ನು ತಡೆದವರು ಯಾರು?**

ಉ: ಗಂಗೆ ಹರಿಯುವ ರಭಸವನ್ನು ತಡೆದವರು ಶಿವ.

I FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

**ಆ) ‘ ಅ’ ಪಟ್ಟಿಯಲ್ಲಿನ ಹೆಸರುಗಳನ್ನು ‘ ಬ ‘ ಪಟ್ಟಿಯೊಂದಿಗೆ ಹೊಂದಿಸಿ ಬರೆ. (Match the following)**

| ಅ | ಬ | ಉತ್ತರ |
|---|---|---|
| ಗಂಗೆ | ರಾಜ | ನದಿ |
| ಜಹ್ನು | ನದಿ | ಮಹರ್ಷಿ |
| ಭಗೀರಥ | ಮಹರ್ಷಿ | ರಾಜ |

**ಇ) ಈ ಕೆಳಗಿನ ಘಟನೆಗಳನ್ನು ಅನುಕ್ರಮವಾಗಿ ಬರೆ. (Arrange the scenario in order)**

೧. ಗಂಗೆ ಭೂಮಿಗೆ ಧುಮ್ಮಿಕ್ಕಿ ಹರಿದು ಬಂದಳು .

೨. ಶಿವನು ಗಂಗೆಯನ್ನು ಶಿರದಲ್ಲಿ ಧರಿಸಿದ .

೩. ಗಂಗೆಯನ್ನು ಭೂಮಿಗೆ ತರಲೇಬೇಕೆಂದು ಭಗೀರಥ ತಪಸ್ಸು ಮಾಡಿದ.

೪. ಜಹ್ನು ಮಹರ್ಷಿ ಗಂಗೆಯನ್ನು ಕಿವಿಯ ಮೂಲಕ ಹರಿಯಲು ಬಿಟ್ಟನು .

**ಉತ್ತರ :**

೧. ಗಂಗೆಯನ್ನು ಭೂಮಿಗೆ ತರಲೇಬೇಕೆಂದು ತಪಸ್ಸು ಮಾಡಿದ .

೨. ಗಂಗೆ ಭೂಮಿಗೆ ಧುಮ್ಮಿಕ್ಕಿ ಹರಿದು ಬಂದಳು .

೩. ಶಿವನು ಗಂಗೆಯನ್ನು ಶಿರದಲ್ಲಿ ಧರಿಸಿದ .

೪. ಜಹ್ನು ಮಹರ್ಷಿ ಗಂಗೆಯನ್ನು ಕಿವಿಯ ಮೂಲಕ ಹರಿಯಲು ಬಿಟ್ಟನು.

**ಈ) ಕೊಟ್ಟಿರುವ ಮಾತನ್ನು ಯಾರು , ಯಾರಿಗೆ ಹೇಳಿದರು?**

**೧. “ಗಂಗೆಯನ್ನು ನಾನು ಶಿರದಲ್ಲಿ ಧರಿಸುತ್ತೇನೆ .”**

ಉ: ಈ ಮಾತನ್ನು ಶಿವನು ಭಗೀರಥನಿಗೆ ಹೇಳುತ್ತಾನೆ .

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

**೨. " ನಿನ್ನ ಇಚ್ಚೆಯಂತೆ ನಾನು ಭೂಮಿಗೆ ಧುಮುಕುತ್ತೇನೆ " .**

ಉ: ಈ ಮಾತನ್ನು ಗಂಗೆಯು ಭಗೀರಥನಿಗೆ ಹೇಳುತ್ತಾಳೆ .

**ಭಾಷಾ ಚಟುವಟಿಕೆ**

**ಅ) ಈ ಪದಗಳಿಗೆ ನಾನಾರ್ಥ ಬರೆಯಿರಿ. Write the different meanings of these words.**

೧. ಮುನಿ = ಋಷಿ , ತಪಸ್ವಿ

೨. ತರು = ಮರ , ವೃಕ್ಷ

**ಆ) ಈ ನುಡಿಗಟ್ಟುಗಳನ್ನು ವಾಕ್ಯಗಳಲ್ಲಿ ಬಳಸಿ ಬರೆಯಿರಿ. (Write sentences using these phrases)**

೧. ಎಳ್ಳಷ್ಟು = ನಾನು ದಾನ ಮಾಡಿದ್ದರಲ್ಲಿ ಎಳ್ಳಷ್ಟು ಮರಳಿ ಕೇಳುವುದಿಲ್ಲ .

೨. ಎದೆಗುಂದು = ನಾನು ಪರೀಕ್ಷೆಯನ್ನು ಎದೆಗುಂದದೆ ಎದುರಿಸುತ್ತೇನೆ .

**ಅ) ಈ ಕೆಳಗಿನ ಪದ್ಯ ಭಾಗಕ್ಕೆ ಸೂಕ್ತ ಲೇಖನ ಚಿಹ್ನೆಗಳನ್ನು ಹಾಕಿರಿ. Put the appropriate article symbols in the following verse.**

**೧. ಭಗೀರಥನ ಅನೇಕ ವರ್ಷಗಳ ಕಠಿಣ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷಳಾದ ಗಂಗೆ ನಿನ್ನ ಇಚ್ಚೆಯಂತೆ ನಾನು ಭೂಮಿಗೆ ಧುಮುಕುತೇನೆ  ಆದರೆ ನನ್ನ ರಭಸವನ್ನು ತಡೆಯುವವರು ಯಾರು ಎಂದಳು**

ಉತ್ತರ : ಭಗೀರಥನ ಅನೇಕ ವರ್ಷಗಳ ಕಠಿಣ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷಳಾದ ಗಂಗೆ , "ನಿನ್ನ ಇಚ್ಚೆಯಂತೆ ನಾನು ಭೂಮಿಗೆ ಧುಮುಕುತ್ತೇನೆ. ಆದರೆ, ನನ್ನ ರಭಸವನ್ನು ತಡೆಯುವವರು ಯಾರು?" ಎಂದಳು.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

**ಚಟುವಟಿಕೆ**

**ಆ) ನಮ್ಮ ರಾಜ್ಯದಲ್ಲಿ ಹರಿಯುವ ನದಿಗಳ ಹೆಸರನ್ನು ಪಟ್ಟಿ ಮಾಡು .**

ಉ: ತುಂಗಾ , ಭದ್ರಾ , ತುಂಗಭದ್ರಾ , ಕಾವೇರಿ , ಮಲಪ್ರಭಾ .

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ